**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ದಿನಾಂಕ 6 ನೇ ಮಾಹೆ ಮಾರ್ಚ್ 2023**

**<u>ಸಿ.ಸಿ.3860/2022</u>**

ಪಿರ್ಯಾದುದಾರರು : ರಾಜ್ಯದ ಪರ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿ : ನಾರಾಯಣ ಉಃ ಸಣ್ಣನಾರಾಯಣಿ,
ಬಿನ್ ದೊಡ್ಡರಾಮಯ್ಯ,
ವಯಸ್ಸು 48 ವರ್ಷ,
ವೃತ್ತಿಃ ವ್ಯವಸಾಯ,
ವಾಸಃ ಸುಣ್ಣದಕೇರಿ,
ಬೆಟ್ಟದಪುರ ಟೌನ್,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ಆರೋಪಣೆ</u>**

ಶ್ರೀಮತಿ.ಶ್ವೇತ.ಜೆ., *ಬಿ.ಕಾಂ., ಎಲ್.ಎಲ್.ಬಿ,* ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ದ ಮಾಡುವ ಆರೋಪಣೆ ಏನೆಂದರೆ,

ಮೊದಲನೇಯದಾಗಿ, ದಿನಾಂಕ 05.07.2022 ರಂದು ಮಧ್ಯಾಹ್ನ 1.30 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಆರೋಪಿರವರ ಮನೆಯ ಹೊಗೆಸೊಪ್ಪು ಮುರಿಯುವ ಕೆಲಸಕ್ಕೆ ಸ್ವಾಮಿರವರು ಹೋಗಿದ್ದು, ಹೊಗೆಸೊಪ್ಪನ್ನು ಕಡ್ಡಿಗೆ ಕಟ್ಟಿ, ಆ ಕಡ್ಡಿಗಳನ್ನು ಬ್ಯಾರನ್ ಮನೆಯ ಮರದ ಪೋಲ್ಸ್‌ಗಳಿಗೆ ಏರಿಸುತ್ತಿದ್ದಾಗ ಸ್ವಾಮಿರವರು ಆಯತಪ್ಪಿ 10 ಅಡಿ ಎತ್ತರದಲ್ಲಿರುವ ಮರದ ಪೋಲ್ಸ್ ನಿಂದ ಕೆಳಗೆ ಬಿದ್ದು, ಗಾಯಗೊಂಡು ಮೈಸೂರಿನ ಜೆ.ಎಸ್.ಎಸ್. ಮತ್ತು ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 17.07.2022 ರ ರಾತ್ರಿ 10.00 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಆರೋಪಿತನಾದ ನೀವು ಹೊಗೆಸೊಪ್ಪಿನ ಬ್ಯಾರನ್ ಮನೆಯಲ್ಲಿ

ಹೊಗೆಸೊಪ್ಪು ಕಡ್ಡಿಗಳನ್ನು ಎತ್ತರದ ಮರದ ಪೋಲ್ಸ್‌ಗಳಿಗೆ ಏರಿಸಲು ಯಾವುದೇ ಮುಂಜಾಗ್ರತಾ ಕ್ರಮವನ್ನು ಅನುಸರಿಸದೇ, ನಿರ್ಲಕ್ಷತೆ ವಹಿಸಿ, ಸ್ವಾಮಿರವರ ಸಾವಿಗೆ ಕಾರಣರಾಗಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು **ಭಾರತ ದಂಡ ಸಂಹಿತೆ ಕಲಂ.304(ಎ)**ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿದ್ದೇನೆ.

ಪ್ರಶ್ನೆ 1. ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ?
ಉತ್ತರಃ ತಿಳಿಯಿತು.

ಪ್ರಶ್ನೆಃ 2. ಈಗ ಓದಿ ಹೇಳಿದ ಆರೋಪಣೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯನ್ನು ಬಯಸುವಿರೋ?
ಉತ್ತರಃ

**(ಶ್ವೇತ.ಜೆ)**
ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ,
ಪಿರಿಯಾಪಟ್ಟಣ.